# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 102 (113)
2. ಮಾನ್ಯ ಸದಸ್ಯರ ಹೆಸರು : ಡಾ: ಯತೀಂದ್ರಎಸ್. (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 09.12.2024
4. ಉತ್ತರಿಸಬೇಕಾದ ಸಚಿವರು : ಮಾನ್ಯ ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯಸಚಿವರು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಜ್ಯದಲ್ಲಿ ಒಟ್ಟು ಸರ್ಕಾರಿ, ಅನುದಾನಿತ ಮತ್ತು ಖಾಸಗಿ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕಾಲೇಜುಗಳಿವೆ: ಇವುಗಳಲ್ಲಿ ಒಟ್ಟು ಎಷ್ಟು ಸೀಟುಗಳು ಲಭ್ಯವಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟಾರೆ 33 ಸರ್ಕಾರಿ ನರ್ಸಿಂಗ್ ಕಾಲೇಜುಗಳಿದ್ದು, 2700 ಬಿ.ಎಸ್ಸಿ. ನರ್ಸಿಂಗ್ ಸರ್ಕಾರಿ ಸೀಟುಗಳು ಲಭ್ಯವಿರುತ್ತವೆ.<br>ಯಾವುದೇ ಅನುದಾನಿತ ನರ್ಸಿಂಗ್ ಕಾಲೇಜುಗಳು ಇರುವುದಿಲ್ಲ.<br>ರಾಜ್ಯದಲ್ಲಿ ಒಟ್ಟಾರೆ 606 ಖಾಸಗಿ ನರ್ಸಿಂಗ್ ಕಾಲೇಜುಗಳಿದ್ದು, 30215 ಬಿ.ಎಸ್ಸಿ. ನರ್ಸಿಂಗ್ ಸೀಟುಗಳು ಲಭ್ಯವಿರುತ್ತವೆ.<br>ರಾಜ್ಯದಲ್ಲಿ 36 ಸರ್ಕಾರಿ ಪ್ಯಾರಾ ಮೆಡಿಕಲ್ ಕಾಲೇಜುಗಳಿದ್ದು, ಒಟ್ಟಾರೆ 4674 ಸರ್ಕಾರಿ ಸೀಟುಗಳು ಲಭ್ಯವಿರುತ್ತವೆ. ರಾಜ್ಯದಲ್ಲಿ ಒಟ್ಟಾರೆ 503 ಖಾಸಗಿ ಪ್ಯಾರಾ ಮೆಡಿಕಲ್‌ಗಳಿದ್ದು, 29132 ಸೀಟುಗಳು ಲಭ್ಯವಿರುತ್ತದೆ.<br>ಜಿಲ್ಲಾವಾರು ಸೀಟುಗಳ ಮಾಹಿತಿಯನ್ನು ಲಗತ್ತಿಸಿದೆ. |
| | ಸರ್ಕಾರವು ಮುಂದಿನ ಐದು ವರ್ಷಗಳಲ್ಲಿ ಎಷ್ಟು ಸರ್ಕಾರಿ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ; ಇದರಿಂದ ಎಷ್ಟು ಸೀಟುಗಳು ಹೆಚ್ಚು ಲಭ್ಯವಾಗುವುವು: | ಪ್ರಸ್ತುತ ಸರ್ಕಾರಿ ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸುವ ಉದ್ದೇಶ ಇರುವುದಿಲ್ಲ. |
| (ಇ) | 2023-24 ಮತ್ತು 2024-25ನೇ ಸಾಲಿನಲ್ಲಿ ಸರ್ಕಾರಿ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಕಾಲೇಜುಗಳನ್ನು ಸ್ಥಾಪಿಸಲು ಎಷ್ಟು ಅನುದಾನ ಒದಗಿಸಲಾಗಿದೆ? (ವರ್ಷವಾರು ಮಾಹಿತಿ ನೀಡುವುದು) | 2023-24ನೇ ಸಾಲಿನಲ್ಲಿ ಸರ್ಕಾರಿ ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಕಾಲೇಜುಗಳನ್ನು ಹೊಸದಾಗಿ ಪ್ರಾರಂಭಿಸಿರುವುದಿಲ್ಲ.<br>2024-25ನೇ ಸಾಲಿನಲ್ಲಿ 2 ಸರ್ಕಾರಿ ನರ್ಸಿಂಗ್ ಕಾಲೇಜುಗಳು ಹಾಗೂ 1 ಪ್ಯಾರಾಮೆಡಿಕಲ್ ಕಾಲೇಜುಗಳನ್ನು ಶಾಶ್ವತ ಅನುದಾನರಹಿತವಾಗಿ ಪ್ರಾರಂಭಿಸಲಾಗಿದೆ. |

**ಸಂಖ್ಯೆ:**ಎಂಇಡಿ 646 ಎಂಎಸ್‌ಎಫ್ 2024

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ವೈದ್ಯಕೀಯ ಶಿಕ್ಷಣ ಹಾಗೂ
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.